## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## ಎಸ್.ಸಿ ಸಂಖ್ಯೆ– 8/2023

| | | | |
|---|---|---|---|
| **ಸಾಕ್ಷಿದಾರನ ಹೆಸರು** | : ಉಮೇಶ್ | | **ಪಿ.ಡಬ್ಲ್ಯೂ–** 12 |
| **ತಂದೆಯ ಹೆಸರು** | : ನಾರಾಯಣಪ್ಪ | | **ಸಿ.ಡಬ್ಲ್ಯೂ–** 23 |
| **ವಯಸ್ಸು** | : 52 ವರ್ಷ | | |
| **ಉದ್ಯೋಗ** | : ಆಟೋ ಚಾಲಕ | | |
| **ವಾಸಸ್ಥಳ** | : ಬೆಲವತ್ತಾ ಗ್ರಾಮ. | | |

**ಸಾಕ್ಷಿಯನ್ನು ಈ ದಿನ ದಿ:07.03.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

**1.** ನಾನು ಪ್ಯಾಸೆಂಜರ್ ಆಟೋವಿನ ಚಾಲಕನಾಗಿರುತ್ತಾನೆ. ಆರೋಪಿತರು ನಮ್ಮ ಊರಿನವರು ನನಗೆ ಪರಿಚಿತರಾಗಿರುತ್ತಾರೆ.

**2.** ಯಾವ ಕಾರಣಕ್ಕೆ ಆರೋಪಿತರ ಮೇಲೆ ಪ್ರಕರಣ ದಾಖಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ನಾನು ಯಾವುದೇ ಗಲಾಟೆ ನೋಡಿರುವುದಿಲ್ಲ. ಪೊಲೀಸರು ನನ್ನ ಸಹಿಯನ್ನು ಮಾತ್ರ ಪಡೆದಿರುತ್ತಾರೆ. ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ. ನನಗೆ ಯಾವುದೇ ವಿಡಿಯೋ ತೋರಿಸಿರುವುದಿಲ್ಲ. ನಾನು ಶಾಲಾ ಮಕ್ಕಳನ್ನು ಆಟೋದಲ್ಲಿ ಕರೆದುಕೊಂಡು ಹೋಗಿ ಬರುವುದು ಮಾಡುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

3. ದಿಃ- 19.01.2020 ರಂದು ಬಾನುವಾರವಾಗಿದ್ದರಿಂದ ಸ್ಕೂಲ್ ಬಾಡಿಗೆ ಇಲ್ಲದೇ ನಾನು ಬೆಲವತ್ತಾ ಗ್ರಾಮದ ಅರಳೀಮರದ ಬಳಿ ಪ್ಯಾಸೆಂಜರನ್ನು ಅತ್ತಿಸಿಕೊಳ್ಳುತ್ತಿದ್ದಾ, ಮೇಲಿನಿಂದ ಜೋರಾಗಿ ಒಂದು ಆಟೋ ಮುಂದೆ ಹೋಯಿತು. ಆ ಆಟೋದಲ್ಲಿ ಒಂದು ಮೇಕೆ ಇತರೆ ಆಸಾಮಿಗಳು ಇದ್ದರು. ಅವರ ಹಿಂದೆ 4-5 ಸ್ಕೂಟರಿನಲ್ಲಿ ಹಿಂಬಾಲಿಸಿಕೊಂಡು ಕಳ್ಳಕಳ್ಳ ಎಂದು ಕಿರುಚಿಕೊಂಡು ಹೋಗುತ್ತಿದ್ದರು. ಪ್ಯಾಸೆಂಜರ್ ಅತ್ತಿಸಿಕೊಂಡು ಹೊರಟು ಸ್ವಲ್ಪ ದೂರದಲ್ಲಿ ಕ್ರಾಸಿನಲ್ಲಿ ಜೋರಾಗಿ ಹೋದ ಆಟೋ ಲಕ್ಷ್ಮೀ ಹೋಟೆಲ್ ಕ್ರಾಸಿನಲ್ಲಿ ಪಲ್ಟಿ ಹೊಡೆದು ಬಿದ್ದಿತ್ತು. ಸದರಿ ಆಟೋದ ಬಳಿ ಹೋಗಿ ನೋಡಿದಾಗ, ಒಬ್ಬ ಆಟೋ ಬಳಿ ಕೆಳಗೆ ಬಿದ್ದಿದ್ದ ಒಬ್ಬ ಯುವಕನಿಗೆ ಭರತ್ , ರವಿ, ಗಣೇಶ ಮತ್ತು ಮಹೇಶ್ ರವರು ಸೇರಿ ಮೈಕೈಗೆ ತಲೆಗೆ ಮನಬಂದಂತೆ ಹೊಡೆದು ಹಲ್ಲೆ ಮಾಡಿದರು. ಸುಮಾರು 11.55 ಕ್ಕೆ ಗೋಪಾಲ್ ರವರು ಬಂದು ಮೇಕೆಯನ್ನು ಗುರುತಿಸಿ ಕಳ್ಳತನ ಮಾಡಿಕೊಂಡು ಬಂದಿರುತ್ತಾರೆ ಎಂದು ತಿಳಿಸಿದರು. ಹೊಟ್ಟೆ ಹಿಡಿದುಕೊಂಡು ಸುಸ್ತಾಗಿದವನನ್ನು ಕೇಳಿದಾಗ, ಆತ ಜಹೀರುದ್ದೀನ್ ಎಂದು ತಿಳಿಸಿದ. ನಂತರ ಚಾ.ಸಾಃ21 ಮತ್ತು 22 ರವರು ಚಾ.ಸಾಃ2 ರವರನ್ನು ಹೋಟೆಲ್ ಬಳಿ ವಾಹನದಲ್ಲಿ ಕೂರಿಸಿಕೊಂಡು ಬಂದರು. ಆಗ ಆತನ ಮೇಲೂ ಕೂಡ ಆರೋಪಿತರು ಹಲ್ಲೆ ಮಾಡಿದರು. ನಂತರ ನಾನು ಆಟೋದಲ್ಲಿ ಹೊರಟು ಹೋದೆ. ಸಂಜೆಗೆ ಜಹೀರುದ್ದೀನ್ ತೀರಿಕೊಂಡ ಎಂಬ ವಿಚಾರ ತಿಳಿದು ಬಂದಿರುತ್ತದೆ. ನಂತರ ಪೊಲೀಸರು ಲಕ್ಷ್ಮೀ ಹೋಟೆಲಿನಲ್ಲಿ ಅಳವಡಿಸಿದ ಸಿಸಿಟಿವಿ ಕ್ಯಾಮೆರಾದಲ್ಲಿನ ದೃಶ್ಯಾವಳಿಗಳನ್ನು ನನಗೆ

ತೋರಿಸಿದಾಗ ನಾನು ಹಲ್ಲೆ ಮಾಡಿದವರನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಇದೇ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಶಾನೆ ಪಿ–17 ಎಂದು ಗುರುತಿಸಲಾಯಿತು.

**4.** ನಾನು ಪ್ರತ್ಯಕ್ಷವಾಗಿ ಘಟನೆ ನೋಡಿ ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**